ನಿಂತಿದ್ದೇನೆ' ಎಂದರು. ಭಾವೇಶ್ ಅವರಿಗೆ ಆಗಲೇ ಅರಿವಾದದ್ದು ಅಷ್ಟು ಸರಳವಾಗಿ ತಮ್ಮ ಕೆಲಸವನ್ನು ನೋಡಲು ಬಂದವರು ಸುಪ್ರಸಿದ್ಧ ಅಜೀಮ್ ಪ್ರೇಮ್‌ಜಿ ಎಂದು. ಅವರು ತಮ್ಮ ಡ್ರೈವರ್ ಅನ್ನು ಕರೆದು ಮೊಬೈಲ್ ಫೋನ್ ತರಲು ಹೇಳಿದರು. ಡ್ರೈವರ್ ಭಾವೇಶ್ ಮತ್ತು ಅಜೀಮ್ ಪ್ರೇಮ್‌ಜಿ ಅವರ ಫೋಟೊ ತೆಗೆದರು. ಹೊರಡುತ್ತಾ ಪ್ರೇಮ್‌ಜಿ ಅವರು ತಮ್ಮ ವಿಸಿಟಿಂಗ್ ಕಾರ್ಡ್ ಅನ್ನು ಭಾವೇಶ್ ಅವರ ಕೈಯಲ್ಲಿ ಇಡುತ್ತಾ 'ನಿಮಗೆ ಏನಾದರೂ ಅಗತ್ಯದ್ದು ಬೇಕೆನಿಸಿದರೆ, ಖಂಡಿತಾ ಸಂಪರ್ಕಿಸಿ' ಎಂದು ಹೇಳಿ ಹೊರಟರು.

ನೀತಾ ಬಂದಾಗ, ಅಜೀಮ್ ಪ್ರೇಮ್‌ಜಿ ಅವರ ವಿಸಿಟಿಂಗ್ ಕಾರ್ಡ್ ನೋಡಿ 'ಅವರೊಡನೆ ಫೋಟೊ ತೆಗೆಸಿಕೊಂಡೆಯಾ?' ಎಂದು ಉದ್ಗರಿಸಿದರು. 'ಹೌದು, ಆದರೆ ಫೋಟೊ ಅವರ ಮೊಬೈಲ್‌ನಲ್ಲಿ ತೆಗೆದದ್ದು. ನನಗೆ ಆ ಕ್ಷಣ ನನ್ನ ಮೊಬೈಲ್‌ನಲ್ಲಿ ತೆಗೆಸಿಕೊಳ್ಳಬೇಕು ಎನ್ನುವುದು ಹೊಳೆಯಲೇ ಇಲ್ಲ' ಎಂದರು. ಅವರ ವಿಸಿಟಿಂಗ್ ಕಾರ್ಡ್ ಫೋನ್ ನಂಬರ್ ನೋಡಿ ಆ ಫೋಟೊ ಕಳುಹಿಸಿ ಕೊಡಲು ವಿನಂತಿಸಿಕೊಂಡರು. ಮತ್ತೆ ಅರ್ಧ ಗಂಟೆಯಲ್ಲಿಯೇ ಆ ಸವಿನೆನಪಿನ ಫೋಟೊ ನೀತಾ ಅವರಿಗೆ ದೊರಕಿತ್ತು.

ಹೀಗೆಯೇ ಒಂದು ಸಮಾರಂಭದಲ್ಲಿ ನಾರಾಯಣಮೂರ್ತಿ ಅವರ ಭೇಟಿಯೂ ಆಗಿತ್ತು. ಅವರ ಸರಳ ನಡವಳಿಕೆಯೂ ಭಾವೇಶ್ ಅವರ ಮನಸ್ಸನ್ನು ಸೂರೆಗೊಂಡಿತ್ತು. ಇದೇ ಅಂಧ ತಂಡದ ಶುಭಕಾಮನೆಗಳು ಮುಂದೆ ನಡೆದು ಒಂದು ವರ್ಷದಲ್ಲಿಯೇ ಕೆಲಸ ಎಷ್ಟು ಹೆಚ್ಚಿತೆಂದರೆ, ಈ ಜಾಗ ಕೂಡ ಚಿಕ್ಕದೆನಿಸತೊಡಗಿತು. ಒಂದು ದಿನ ಭಾವಸಾ ಮೋರೇಶ್ವರಕ್ಕೆ ಬಂದಾಗ, ಅವರ ಜೊತೆಯಲ್ಲಿ ಮನೋಜ್ ಖೈರ್ಕರ್ ಕೂಡಾ ತಮ್ಮ ಕುಟುಂಬದೊಡನೆ ಬಂದಿದ್ದರು. ಅವರು ಕೂಡಾ ಓಶೋ ಅವರ ಅನುಯಾಯಿ. ಅವರ ಇಬ್ಬರು ಹೆಣ್ಣುಮಕ್ಕಳು ಸೋನಲ್ ಮತ್ತು ತನ್ವೀ ಸಿವಿಲ್ ಇಂಜಿನಿಯರುಗಳಾಗಿದ್ದರು. ಇದೀಗ ಅವರು ಇಂಗ್ಲೆಂಡಿನಲ್ಲಿ ಸ್ನಾತಕೋತ್ತರ ಪದವಿ ಪಡೆದು ಹಿಂತಿರುಗಿದ್ದರು. ಮನೋಜ್ ಖೈರ್ಕರ್ ಇಲ್ಲಿ ಇಷ್ಟೆಲ್ಲ ಅಂಧಮಿತ್ರರನ್ನು ನೋಡಿ, ಜಾಗ ಕಡಿಮೆ ಆಗಿರುವುದನ್ನು ಕಂಡು, 'ನೀವು ಮೇಲೆ ಒಂದೆರಡು ಮಹಡಿಗಳನ್ನು ಹಾಕಬಹುದಲ್ಲ' ಎಂದರು. 'ಮಹಾಬಲೇಶ್ವರ ಪರ್ಯಾವರಣ ಸಂವೇದನಶೀಲ ಕ್ಷೇತ್ರವಾದ ಕಾರಣ, ಮೇಲೆ ಮಹಡಿಗಳನ್ನು ನಿರ್ಮಾಣ ಮಾಡುವಂತಿಲ್ಲ' ಎಂದು ಭಾವಸಾ ಅವರಿಗೆ ವಿವರಿಸಿದರು. 'ಹೆಚ್ಚು ಜಾಗ ಬೇಕು ಎಂದರೆ, ನಾವು ನೆಲದ ಮೇಲೆಯೇ ಹರಡಿ ಹಿಗ್ಗಿಸಿಕೊಳ್ಳಬೇಕು'. ಅಷ್ಟೆಲ್ಲ ಜಾಗ ಭಾವೇಶ್ ಅವರ ಬಳಿ ಇರಲಿಲ್ಲ.

ಆ ದಿನ ಭಾವೇಶ್ ಅವರ ಮನಸ್ಸಿನಲ್ಲಿ ಒಂದು ವಿಚಾರ ಬಂದಿತು. ಗಂಗಾರಾಮ್ ಪಾಟೀಲ್ ಮತ್ತು ಸುಹಾಸ್ ಪಾಟೀಲ್ ಅವರೊಡನೆ ಕೇಳಿ ನೋಡೋಣ ಅನಿಸಿತು. ಅವರುಗಳು ತಮ್ಮ ಆ 7000 ಚದರ ಅಡಿಯ ಜಾಗದಲ್ಲಿ ಯಾವುದೇ ಡೆವಲಪ್‌ಮೆಂಟ್ ಕೆಲಸ ಮಾಡಲು ಬಯಸಿರಲಿಲ್ಲ. ಅವುಗಳಲ್ಲಿ ಒಂದು ನಿವೇಶನ ಸಿಕ್ಕಿದರೂ, ಅದನ್ನು ಕೊಂಡು ಅಲ್ಲಿ ಅಂಧಮಿತ್ರರಿಗೆ ಅಗತ್ಯವಾದ ಮತ್ತೊಂದು ಹಾಸ್ಟೆಲ್ ಕಟ್ಟಿಸಬಹುದು. ಅಂತಹ ಹಾಸ್ಟೆಲಿನ ನಿರ್ಮಾಣಕ್ಕೆ ಬೇಕಾಗುವ ಹಣವನ್ನೂ ಅಂದಾಜು ಮಾಡಿದರು. ಜಮೀನಿನ ಮೌಲ್ಯವನ್ನು ಹೊರತುಪಡಿಸಿ, ಹಾಸ್ಟೆಲ್ ನಿರ್ಮಾಣಕ್ಕೆ ಸುಮಾರು 15 ಲಕ್ಷ ರೂಪಾಯಿ ಆಗಬಹುದು ಎನಿಸಿತು. ಇಷ್ಟು ಹೊತ್ತಿಗೆ ಮೊದಲಿನ ಸಾಲವನ್ನು ತೀರಿಸಿಯಾಗಿತ್ತು. ಹಾಗೆಂದೇ ಸುಹಾಸ್ ಅವರ 7000 ಚದರ ಅಡಿಯ ಜಮೀನು ಕೊಂಡುಕೊಳ್ಳಲು ಪ್ರಯತ್ನಿಸಲು ಬಯಸಿದರು. ಭಾವೇಶ್ ಅವರಿಗೆ ತಿಳಿದಿತ್ತು, ಸುಹಾಸ್ ಅವರು ಆ ನಿವೇಶನವನ್ನು 7 ಲಕ್ಷ ರೂಪಾಯಿಗೆ ಕೊಂಡಿದ್ದರು. ಆದರೆ ಅದು ಐದು ವರ್ಷಗಳ ಹಿಂದಿನ ಮಾತು. ಈಗ ಅದರ ಬೆಲೆ ಹೆಚ್ಚಿತ್ತು. ಅವರು 15.5 ಲಕ್ಷ ರೂಪಾಯಿಗೆ ಆ ನಿವೇಶನವನ್ನು ಮಾರಲು ಒಪ್ಪಿದರು. ಮೂರ್ನಾಲ್ಕು ಲಕ್ಷ ರೂಪಾಯಿ ಭಾವೇಶ್ ಅವರ ಬಳಿ ಇತ್ತು. ಉಳಿದ ಹಣವನ್ನು ಬ್ಯಾಂಕಿನಿಂದ ಸಾಲವಾಗಿ ಪಡೆದು, ಸುಹಾಸ್ ಅವರಿಂದ 15.5 ಲಕ್ಷಕ್ಕೆ ಆ ಜಮೀನನ್ನು ಕೊಂಡರು.

ಅಧ್ಯಾಯ–18

## ಬದುಕು ನಿನ್ನಲ್ಲೆಂಥಾ ಮುನಿಸು

ಜಮೀನು ಖರೀದಿಸಿದ ತಕ್ಷಣವೇ ಭಾವಸಾ ಅವರ ಮಾತುಗಳಂತೆ, ಖೈರ್ಕರ್ ಮತ್ತು ಅವರ ಮಗಳು ಸೋನಲ್ ಪೂರಾ ಪ್ರಾಜೆಕ್ಟ್‌ನ ವಿನ್ಯಾಸ ಮಾಡಲು ಆರಂಭಿಸಿದರು. ಸುಮಾರು ನೂರು ಅಂಧ ಸೋದರ ಸೋದರಿಯರು ಅಲ್ಲಿ ಇರಲು ವ್ಯವಸ್ಥೆ ಆಗಬೇಕಿತ್ತು. ಅದರಲ್ಲಿ ಎರಡು ದೊಡ್ಡ ಹಾಲ್‌ಗಳು, ಎಂಟು ಶೌಚಾಲಯಗಳು, ಒಮ್ಮೆಗೇ ಐವತ್ತು ಜನ ಕುಳಿತು ಸಹಭೋಜನವನ್ನು ಮಾಡುವಂತಿರುವ ಡೈನಿಂಗ್ ಹಾಲ್, ತರಪೇತು ನೀಡಲು ಹಾಗೂ ಇನ್ನೇನಾದರೂ ಕಾರ್ಯಕ್ರಮಗಳನ್ನು ಮಾಡಲು ಒಂದು ದೊಡ್ಡ ಸಮ್ಮೇಳನದ ಕೊಠಡಿ – ಈ ರೀತಿಯಲ್ಲಿ ತಮ್ಮ ಅಗತ್ಯಗಳನ್ನು ತಿಳಿಸಿದರು. ಜಾಗವನ್ನು ಸರ್ವೆ ಮಾಡಿದಾಗ ಒಂದು ಅಡಚಣೆ ಎದುರಾಯಿತು. ಯಾವ ಜಾಗದಲ್ಲಿ ನಿರ್ಮಾಣ ಮಾಡಬೇಕಿತ್ತೋ ಅದರ ಆಸುಪಾಸಿನಲ್ಲಿ ಬೆಟ್ಟಗಳಿವೆ. ಮಳೆಗಾಲದಲ್ಲಿ ಸತತ ಮಳೆ ಬೀಳುವಾಗ, ಬಿದ್ದ ನೀರೆಲ್ಲವೂ ಮೊದಲಿನ ಕಟ್ಟಡಗಳ ಬಗಲಲ್ಲಿ ನದಿಯಂತೆ ಹರಿದು ಹೋಗುತ್ತದೆ. ನೀರಿನ ಆ ಪ್ರವಾಹವನ್ನು ಇನ್ನೊಂದು ಕಡೆಗೆ ತಿರುಗಿಸುವ ಅಗತ್ಯವಿತ್ತು.

ಅದಕ್ಕಾಗಿ ಮೊಟ್ಟಮೊದಲಿಗೆ ಮೂರು ಅಡಿಯಾದರೂ ಅಗಲದ ಸುಮಾರು ಎಂಟು ಅಡಿ ಎತ್ತರದ ಕಲ್ಲಿನ ಗೋಡೆಯನ್ನು ಎದ್ದು ನಿಲ್ಲಿಸುವ ಅಗತ್ಯವಿತ್ತು. ಅಂತಹ ಕಲ್ಲಿನ ಗೋಡೆಯ ಬೆಲೆಯೇ ಸುಮಾರು 15 ಲಕ್ಷ ರೂಪಾಯಿ ಆಗುತ್ತಿತ್ತು. ಇದರೊಡನೆ ಆ ಗೋಡೆಗಳನ್ನು ನೀರಿನ ವೇಗವಾದ ಪ್ರವಾಹದ ಎದುರು ನಿಲ್ಲುವಷ್ಟು ಗಟ್ಟಿಯಾಗಿ ನಿಲ್ಲಿಸಲು, ನೆಲದ ಒಳಗೆ ನಾಲ್ಕು ಅಡಿ ಆಳದಿಂದ ಆರಂಭಿಸಬೇಕಿತ್ತು. ಅಲ್ಲಿ ಹೆಚ್ಚು ಕಡಿಮೆ ಎಲ್ಲ ಅಂಧ ಮಿತ್ರರೂ ವಾಸಿಸಲಿದ್ದರು. ಹಾಗೆಂದೇ ಸುರಕ್ಷತೆಯ ದೃಷ್ಟಿಯಿಂದ ನಾಲ್ಕೂ ಕಡೆಯೂ ಕಾಂಪೌಂಡ್ ಗೋಡೆ ಹಾಕುವ ಅಗತ್ಯವೂ ಇತ್ತು.

ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಹಣವನ್ನು ಅಂದಾಜು ಮಾಡಿದಾಗ, ಅದು ಒಂದೂವರೆ ಕೋಟಿ ರೂಪಾಯಿಯನ್ನು ಮೀರುತ್ತಿತ್ತು! ಮೊದಲಿಗೆ ನಿವೇಶನವನ್ನು ಕೊಳ್ಳಲು ಬ್ಯಾಂಕಿನಿಂದ ಸಾಲ ತೆಗೆದುಕೊಂಡಿದ್ದರು. ಇಷ್ಟೆಲ್ಲ ಹಣವನ್ನು ತರುವುದು ಎಲ್ಲಿಂದ? ಹಾಗೆಂದು ತಮ್ಮ ಕನಸನ್ನು ಕುಗ್ಗಿಸುವುದು ಅವರಿಗೆ ಇಷ್ಟವಿರಲಿಲ್ಲ. ಹೆಚ್ಚು ಜನರಿಗೆ ಜೀವನೋಪಾಯದ ಮಾರ್ಗ ಭಾವೇಶ್ ಮತ್ತು ನೀತಾರ ಗುರಿಯಾಗಿತ್ತು. ಅಂತಹ ಆರ್ಥಿಕ ಸವಾಲುಗಳ ಸಮಯದಲ್ಲಿ ನೀತಾ ತನ್ನೆಲ್ಲ ಒಡವೆಗಳನ್ನು ಭಾವೇಶ್ ಅವರ ಕೈಯಲ್ಲಿ ಇಟ್ಟು, 'ಇದನ್ನು ಮಾರಿ ನಾವು ನಮ್ಮ ಹಾಸ್ಟೆಲ್ ಕಟ್ಟಡ ನಿರ್ಮಾಣದ ಕೆಲಸ ಆರಂಭಿಸೋಣ' ಎಂದರು.

ಭಾವೇಶ್ ಹೇಳಿದರು 'ನೀತಾ, ಇವನ್ನು ಮಾರುವುದು ಸರಿಯಲ್ಲ. ಯಾರಿಗೆ ಗೊತ್ತು, ನಮಗೆ ಇದಕ್ಕಿಂತ ಹೆಚ್ಚು ಕಷ್ಟದ ದಿನಗಳು ಬರಬಹುದು. ಅಂತಹ ತುರ್ತಿನ ಸಮಯದಲ್ಲಿ ಈ ಒಡವೆಗಳು ಕೆಲಸಕ್ಕೆ ಬರುತ್ತವೆ'.

ಆದರೆ ನೀತಾ, 'ಯಾವ ಧ್ಯೇಯಕ್ಕಾಗಿ ನಾವು ಜೊತೆಗೂಡಿದೆವೋ, ಅದು ವಾಸ್ತವವಾಗುತ್ತಿರುವ ಸಮಯವಿದು. ನಾವಿಬ್ಬರೂ ಸೇರಿ ಅಂಧ ಮಿತ್ರರಿಗೆ ತಮ್ಮ ಕಾಲಿನ ಮೇಲೆ ತಾವು ನಿಲ್ಲುವಂತೆ ಮಾಡುತ್ತೇವೆ ಎಂದು ಹೊರಟವರು. ಅವರನ್ನು ಸಕ್ಷಮರನ್ನಾಗಿ, ಸದೃಢರನ್ನಾಗಿ ಮಾಡುತ್ತೇವೆ ಎಂದು ಕನಸು ಕಂಡವರು. ಈ ಹಾಸ್ಟೆಲಿನ ಮೂಲಕ ನಮ್ಮ ಆ ಗುರಿ ಮುಟ್ಟಲು ಸಾಧ್ಯವಿದೆ. ಈ ಒಡವೆಗಳು ನಮ್ಮ ಕನಸನ್ನು ನನಸಾಗಿಸಲು ಸಹಾಯವಾಗುತ್ತವೆ ಎಂದರೆ, ಅದಕ್ಕಿಂತ ಖುಷಿಯ ವಿಷಯ ಮತ್ತಾವುದಿದೆ? ನನಗೆ ಈ ಒಡವೆಗಳ ಅಗತ್ಯವಿಲ್ಲ' ಎಂದು ಸ್ಪಷ್ಟವಾಗಿ ಹೇಳಿಬಿಟ್ಟರು. ಪತ್ನಿಗೆ ಹೇಗೆ ಧನ್ಯವಾದ ಹೇಳಬೇಕು ಭಾವೇಶ್‌ಗೆ ತಿಳಿಯದಾಗಿತ್ತು. ಮತ್ತೇನನ್ನೂ ಹೇಳುವ ಮನಸ್ಥಿತಿಯಲ್ಲಿ ಭಾವೇಶ್ ಇರಲಿಲ್ಲ. ನೀತಾ ಅವರ ಆ ಕೈಗಳನ್ನು ಅವರು ತಮ್ಮ ಬೊಗಸೆಯಲ್ಲಿ ಹಿಡಿದಿದ್ದರು. ಆ ಕೈಗಳು ಸದಾ ಕೊಡುವುದನ್ನಷ್ಟೇ ಕಲಿತಿದ್ದವು. ಆ ಕೈಗಳನ್ನು ಮೆಲ್ಲನೆ ಒತ್ತಿ ತಮ್ಮ ಕೃತಜ್ಞತೆಯನ್ನು ಅಭಿವ್ಯಕ್ತಿಸಿದರು.

ಇದಕ್ಕಿಂತಾ ತುರ್ತು ಪರಿಸ್ಥಿತಿ ಬಾರದಿರಲಿ ಎಂಬ ಪ್ರಾರ್ಥನೆ ಎದೆಯಲ್ಲಿತ್ತು. ಅವರ ಕಣ್ಣಿನ ಕುರುಡುತನ ವಂಶ ಪಾರಂಪರ್ಯವಾಗಿ ಬಂದದ್ದು. ತಮ್ಮ ಮಗ ಕುಣಾಲ್‌ನ ಕಣ್ಣುಗಳ ರೆಟಿನಾವನ್ನು ಪ್ರತಿ ವರ್ಷ ತಪಾಸಣೆ ಮಾಡಿಸುತ್ತಿದ್ದರು. ಆತನ ಕಣ್ಣುಗಳ ಆರೋಗ್ಯವನ್ನು ಕುರಿತು ಬಹಳಷ್ಟು ಮುತುವರ್ಜಿ ಮತ್ತು ಮುಂಜಾಗರೂಕತೆಯನ್ನು ತೆಗೆದುಕೊಳ್ಳುತ್ತಿದ್ದರು. 'ನೀತಾ ಅವರ ವಂಶವಾಹಿಗಳು ಶಕ್ತವಾಗಿವೆ' ಎಂಬ ಭರವಸೆ ಭಾವೇಶ್‌ಗೆ ಮೂಡಿತ್ತು. ಪುಣ್ಯಕ್ಕೆ ಇಲ್ಲಿಯವರೆಗೂ ಕುಣಾಲ್‌ಗೆ ಕಣ್ಣಿನ ತೊಂದರೆ ಕಾಣಿಸಿಕೊಂಡಿರಲಿಲ್ಲ. ತಮ್ಮ ಕಣ್ಣಿನ ಅಂಧತ್ವ ವಂಶಪಾರಂಪರ್ಯವಾಗಿ ಬರುವ ಸಾಧ್ಯತೆ ಇರುವ ಕಾರಣದಿಂದಲೇ ಭಾವೇಶ್ ಮತ್ತು ನೀತಾ